SCHOLARSHIP-3

- **ವಿದ್ಯಾರ್ಥಿವೇತನದ ಹೆಸರು : "ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ವಿದ್ಯಾರ್ಥಿವೇತನ"**

- **ವಿದ್ಯಾರ್ಥಿವೇತನ ಪ್ರಾರಂಭಿಸಲಾದ ವರ್ಷ :** 2006-07

- **ಕಾರ್ಯಕ್ರಮದ ಉದ್ದೇಶಗಳು:** ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿನಿಯರ ವೃತ್ತಿ ಶಿಕ್ಷಣ ವ್ಯಾಸಂಗಕ್ಕೆ ನೆರವು ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

- **ಅರ್ಹತೆಗಳು / ನಿಬಂಧನೆಗಳು :**

  - ಈ ಕಾರ್ಯಕ್ರಮದಡಿಯಲ್ಲಿ ಪ್ರತಿ ಜಿಲ್ಲೆಯಿಂದ ಪದವಿ ಪೂರ್ವ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ 10 ಹೆಣ್ಣುಮಕ್ಕಳಿಗೆ ವೃತ್ತಿ ಶಿಕ್ಷಣ ಪಡೆಯಲು ಹಣಕಾಸು ನೆರವನ್ನು ಸರ್ಕಾರವು ನೀಡುತ್ತದೆ.

  - **ಮಾರ್ಗಸೂಚಿಗಳು :**

    - ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿರುವ ಮತ್ತು ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಶೇ.೮೦ಕ್ಕಿಂತ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿನಿಯರು ಅರ್ಹರು.

    - ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರಕ್ಕಾಗಿ ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿನಿಯರ ಪಟ್ಟಿಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಪ್ರತಿ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ ಒದಗಿಸತಕ್ಕದ್ದು.

    - ಜಿಲ್ಲಾ ಪದವಿ ಪೂರ್ವ ಶಿಕ್ಷಣ ಉಪನಿರ್ದೇಶಕರು ಸದರಿ ಪಟ್ಟಿಯಲ್ಲಿರುವ ವಿದ್ಯಾರ್ಥಿನಿಯರು ಹಾಗೂ ಶೇ.೮೦ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಮೂಲಕ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿನಿಯರ ವಿವರಗಳನ್ನು ದಾಖಲೆಯೊಂದಿಗೆ (ಅವರು ಸರ್ಕಾರದಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ ಎಂದು ಪಡೆದಿರುವ ದೃಢೀಕೃತಗೊಂಡ ಗಣಕೀಕೃತ ಪೋಟೋ ಅಥವಾ ಗಣಕೀಕೃತ ಪಡಿತರ ಕೂಪನ್‌ನ ಪ್ರತಿ) ಮಾಹಿತಿಯನ್ನು ಪರಿಗ್ರಹಿಸತಕ್ಕದ್ದು.

    - ಮೇಲೆ ನಮೂದಿಸಿರುವಂತೆ ಸಂಗ್ರಹಿಸಿದ ಮಾಹಿತಿಯನ್ನು ಖುದ್ದಾಗಿ ಪರಿಶೀಲಿಸುವ ಸಲುವಾಗಿ ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

1.	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2.	ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಉಪಾಧ್ಯಕ್ಷರು
3.	ಉಪನಿರ್ದೇಶಕರು (ಆಹಾರ)	ಸದಸ್ಯರು
4.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ	ಸದಸ್ಯರು
5.	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ	ಸದಸ್ಯರು
6.	ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ	ಸದಸ್ಯರು
7.	ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ	ಸದಸ್ಯ ಕಾರ್ಯದರ್ಶಿ

- ಮೇಲ್ಕಂಡಂತೆ ರಚಿಸಲಾಗಿರುವ ಜಿಲ್ಲಾ ಸಮಿತಿಯು ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಎಂದು ಗುರ್ತಿಸಲ್ಪಟ್ಟ ಎಲ್ಲಾ ಫಲಾನುಭವಿಗಳ ಮಾಹಿತಿಯನ್ನು ಆಹಾರ ಇಲಾಖೆಯಿಂದ ದಿನಾಂಕ:18.04.2005ರಲ್ಲಿ ನಿಗದಿಗೊಳಿಸಲಾದ ನಿರ್ದಿಷ್ಟ ಮಾನದಂಡಗಳ ಬಗ್ಗೆ ಪ್ರತಿ ವಿದ್ಯಾರ್ಥಿನಿಯ ವಿವರಗಳನ್ನು ಪರಿಶೀಲಿಸಿ, ಅವರು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಸದಸ್ಯರು ಎಂಬ ಬಗ್ಗೆ ದೃಢೀಕರಣ ನೀಡಬೇಕು.

- ಪ್ರತಿ ಜಿಲ್ಲೆಯಿಂದ ಬರುವ ದೃಢೀಕರಣಗೊಳಿಸಿದ ಮಾಹಿತಿಯನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳೆಂದು ಗುರ್ತಿಸಿ ಅವರುಗಳ ವೃತ್ತಿ ಶಿಕ್ಷಣ ಶುಲ್ಕ ಮರು ಪಾವತಿಸಲು, ಈ ಕೆಳಕಂಡಂತೆ ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ.

ಎ) <u>ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ</u>

1. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ	ಅಧ್ಯಕ್ಷರು
2.ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
3.ಸಹ ನಿರ್ದೇಶಕರು (ಆಡಳಿತ) ಪದವಿ ಪೂರ್ವ ಶಿಕ್ಷಣ ಇಲಾಖೆ	ಸದಸ್ಯ ಕಾರ್ಯದರ್ಶಿ

- ರಾಜ್ಯ ಮಟ್ಟದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರು, ಕೇಂದ್ರ ಕಛೇರಿ, ಇವರು ಎರಡೂ ಕಾರ್ಯಕ್ರಮಗಳ ಅನುಷ್ಠಾನದ ನೋಡಲ್ ಅಧಿಕಾರಿಗಳಾಗಿರತ್ಕದ್ದು. ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಅಗತ್ಯ ಪೂರಕ ಸಿಬ್ಬಂದಿಯನ್ನು ಒದಗಿಸತಕ್ಕದ್ದು.

- ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆಯಾದ ವಿದ್ಯಾರ್ಥಿಗಳು/ವಿದ್ಯಾರ್ಥಿನಿಯರು ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ಬಗ್ಗೆ ಮಾಹಿತಿಯನ್ನು ಸಿ.ಇ.ಟಿ. ಘಟಕದಿಂದ ಹಾಗೂ ಕೃಷಿ ವಿಶ್ವವಿದ್ಯಾಲಯದಿಂದ ಪದವಿ ಪೂರ್ವ ಶಿಕ್ಷಣ ನಿರ್ದೇಶಕರು ಪಡೆದು ಮೇಲಿನ ಸಮಿತಿಗಳ ಮುಂದೆ ಮಂಡಿಸಿ, ಅಂಗೀಕಾರ ಪಡೆಯತಕ್ಕದ್ದು.

- ಈ ಅರ್ಹ ಫಲಾನುಭವಿಗಳು ಸಿ.ಇ.ಟಿ. ಘಟಕ ಪ್ರವೇಶಕ್ಕೆ ನಿಗದಿಪಡಿಸಿರುವ ಮೊತ್ತದ ಮರುಪಾವತಿಗೆ ಅರ್ಹರಾಗಿರುತ್ತಾರೆ.

- ಈ ಸೌಲಭ್ಯವು ಕರ್ನಾಟಕ ರಾಜ್ಯದಲ್ಲಿರುವ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಫಲಾನುಭವಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

SCHOLARSHIP-3

- **NAME OF THE SCHEME : KITTUR RANI CHENNAMMA PURASKAR SCHOLARSHIP**
- YEAR IN WHICH INTORDUCED : 2006-07
- AIM OF THE SCHEME : To provide Financial Assistants to the Girl students who belongs to Below Poverty Line (BPL) to enable them to study to complete Professional Courses.
- **CONDITIONS & ELIGIBILITY** :
  - ❖ This Scheme is open to 10 Girls students in each District of Karnataka. Those girls students who have secured high percentage if marks and who hail from families that possess us BPL Card.
  - ❖ Girls students who obtained 80% & above marks in PUC studying in Government & Aided Pre-University Colleges are eligible to apply for this scholarship.
  - ❖ The Director, Pre-University Board must send the Districtwise list of Girl students who have obtained highest Marks in PUC to District Deputy Directors of Pre-University.
  - ❖ The District Deputy Directors of Pre-University Board should obtain the details

    pertaining to students from BPL families, whose names are included in the list sent by the Director, Pre-University Board and who have secured more than 80% marks in II PU examination, from the principals of colleges from where the student has completed II PUC (the copy of computerized Photo certifying that the student hails from a BPL family or copy of computerized ration card coupon).
  - ❖ The above obtained information is scrutinized by the District Committee. The composition of the Committee is as mentioned below:

Deputy Commissioner	Chairman
Zilla Panchayat CEO	Vice Chairman
Deputy Director (Food)	Member
District Social Welfare Officer	Member
Women & Child Welfare District Officer	Member
Deputy Director, Department of Public Instruction	Member
Deputy Director, Dept., of Pre-University Education	Member

  - ❖ The Committee constituted as above, should scrutinize the BPL Card information of each of the beneficiaries including girl students and students, as per the norms prescribed & guidelines issued by the Food Department on 18-04-2005 & certify that the beneficiaries should hail from BPL families.

- A committee is constituted to scrutinize the attested information received from each District and certify that the identified students are eligible to be the beneficiaries of the scheme and reimburse the fee paid for professional courses. The composition of the committee is as follows:

A) Director, Department of Collegiate Education …. Chairman

B) Accounts Officeer, Dept., of Collegiate Education …. Member

C) Assistant Director (Admn.) Dept., of Pre-University Education Secretary …. Member

- At the state level, for the Implimentation of Kittur Rani Chennamma Puraskar Scholarship the Assistant Director of Pre-University Education Department will be the Nodal Officer for both the programmes. The Director of Pre-University Education Department should provide required staff for the implementation of this scheme.

- The Director of Pre-University Board should obtain the information regarding joining of Professional Courses by the students whose names figure in the approved list of eligible students prepared by the State Level Committee. The information regarding students who have entered Professional Courses should be obtained from CET Board & students pursuing B.Sc. Agriculture & Horticulture from University of Agricultural Sciences. The Director of Pre-University Board should place this information before the committee and obtain the approval.

- The students selected from the State Level Committee are eligible for reimbursement of the fees paid to the CET cell. This Scheme is only for those students who take admission within Government & Aided Colleges of Karnataka.